# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಗ್ರಾಮ ಪಂಚಾಯತಿಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಬೇಕಾಗಿರುವ ವಿದ್ಯುತ್ ಶುಲ್ಕವನ್ನು ನೇರವಾಗಿ ಇಂಧನ ಇಲಾಖೆಗೆ 2021-22ನೇ ಸಾಲಿನ ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಅಧಿಕೃತ ಜ್ಞಾಪನ ಸಂಖ್ಯೆ: ಆಇ 2 ಬಿಪಿಇ 2021 ದಿನಾಂಕ:1.4..2021
2. ಸರ್ಕಾರದ ಪತ್ರ ಸಂಖ್ಯೆ: ಆಇ 1 ಟಿ.ಎಫ್.ಪಿ.2021 ದಿನಾಂಕ:5.4.2021
3. ಇಂಧನ ಇಲಾಖೆಯ ಕಡತ ಸಂಖ್ಯೆ: ಎನರ್ಜಿ 131 ಪಿ.ಎಸ್.ಆರ್.2021
4. ಆರ್ಥಿಕ ಇಲಾಖೆ ವೆಚ್ಚ 1 ಶಾಖೆಯ ಕಡತ ಸಂಖ್ಯೆ: ಆಇ 160 ವೆಚ್ಚ 1/2021

**ಪ್ರಸ್ತಾವನೆ:**

ರಾಜ್ಯದ ಗ್ರಾಮ ಪಂಚಾಯತಿಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಾಕಿ ಪಾವತಿಸಬೇಕಾಗಿರುವ ವಿದ್ಯುತ್ ಶುಲ್ಕಪಾವತಿಗಾಗಿ ಆಯವ್ಯಯದಲ್ಲಿ ಲಿಂಕ್ ಲೆಕ್ಕ ಶೀರ್ಷಿಕೆ 2515-00-198-1-12-300(ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2515-00-103-0-97-059) ರಡಿ ರೂ.73633.88ಲಕ್ಷಗಳ ಅನುದಾನವನ್ನು 2021-22ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದೆ. ಮೇಲ್ (1)ರಲ್ಲಿ ಓದಲಾದ ಪತ್ರದಲ್ಲಿ 2021-22ನೇ ಸಾಲಿನಲ್ಲಿ ಪೂರ್ಣ ಪ್ರಮಾಣದ ವೆಚ್ಚವನ್ನು ಮಾಡಲು ಸಹಮತಿಸಿದ್ದು, ಮೇಲೆ(2)ರಲ್ಲಿ ಓದಲಾದ ಆದೇಶದಲ್ಲಿ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ವೆಚ್ಚಕ್ಕಾಗಿ ಮಾತ್ರ ಅನುದಾನವನ್ನು ಬಿಡುಗಡೆಗೊಳಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

2021-22ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 2515-00-198-1-12-300 (ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2515-00-103-0-97-059) ಖಾತರೀಕರಣ ಯೋಜನೆಯಡಿ ಸಾಲದ ಮೇಲಿನ ಬಡ್ಡಿ, ಅಸಲು ಮರುಪಾವತಿಗಾಗಿ ಮೊದಲನೇ ಕಂತಿನ ಅನುದಾನವಾಗಿ ರೂ.11771.26ಲಕ್ಷ ಮತ್ತು ರೂ.5855.49ಲಕ್ಷ ಒಟ್ಟು ರೂ.17626.75ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2515-00-198-1-12-300 (ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ 2515-00-103-0-97-059) ರಡಿ ಇಂಧನ ಇಲಾಖೆಯ ಅಧೀನ ಕಾರ್ಯದರ್ಶಿಗಳಿಗೆ ಬಿಡುಗಡೆಗೊಳಿಸಲು ಪ್ರಸ್ತಾವಿಸಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಪ್ರಸ್ತಾವಿಸಿರುವ ರೂ.17626.76ಲಕ್ಷಗಳನ್ನು ಖಾತರೀಕರಣದಡಿ ಕಂಪನಿಗಳು ಪಡೆದಿರುವ ಸಾಲದ ಮೇಲಿನ ಅಸಲು ಮತ್ತು ಬಡ್ಡಿ ಪಾವತಿಗಾಗಿ ಸಂಬಂಧಪಟ್ಟವರಿಗೆ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 216 ವೆಚ್ಚ 6/2021 (ಇ-ಆಫೀಸ್) ದಿನಾಂಕ:16ನೇ ಏಪ್ರಿಲ್ 2021**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಗ್ರಾಮ ಪಂಚಾಯತಿಗಳು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂದಾಯಿಸಬೇಕಾಗಿರುವ ಏಪ್ರಿಲ್ 2021ರಿಂದ ಜೂನ್ 2021ರವರೆಗೆ ರೂ.17626.75ಲಕ್ಷ (ರೂಪಾಯಿ ಹದಿನೇಳು ಸಾವಿರದ ಆರು ನೂರ ಇಪ್ಪತ್ತಾರು ಲಕ್ಷದ ಎಪ್ಪತ್ತೈದು ಸಾವಿರಗಳು ಮಾತ್ರ)ಗಳನ್ನು 2515-00-198-1-12-300ರಡಿ ಇಂಧನ ಇಲಾಖೆಯ ವಿದ್ಯುತ್ ಸರಬರಾಜು ಕಂಪನಿಗಳು ಪಾವತಿಸಬೇಕಾಗಿರುವ ಅಸಲು ಮತ್ತು ಬಡ್ಡಿಗಾಗಿ ಇಂಧನ ಇಲಾಖೆಯ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಾದ ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ ಇವರಿಗೆ ಬಿಡುಗಡೆಗೊಳಿಸಿದೆ.

ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಇಂಧನ ಇಲಾಖೆಯು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಇವರನ್ನು ಖಾತರೀಕರಣದ ಪ್ರಸ್ತಾವನೆಗಳ ಬಗ್ಗೆ ಕ್ರಮವಹಿಸಲು ಪ್ರಾಧಿಕರಣ ನೀಡಿರುವುದರಿಂದ ಸದರಿ ಕಂಪನಿಯ ಮೂಲಕ ಪ್ರತಿ ತಿಂಗಳಿಗೆ ಸಾಲದ ಮೇಲಿನ ಬಡ್ಡಿ ಪಾವತಿಸುವ ಸಲುವಾಗಿ **ಅನುದಾನವನ್ನು ಮಾಸಿಕವಾಗಿ** ನಿಯಮಾನುಸಾರ ಬಿಡುಗಡೆಗೊಳಿಸಲು ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಪುರುಷೋತ್ತಮ್ ಸಿರಗ್ ಬಿ.ಹೆಚ್.)**
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಮಹಾಲೇಖಪಾಲರು (ಎ&ಇ) ಲೆಕ್ಕ ಪರಿಶೋಧನೆ 1 ಮತ್ತು 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ-2, 7ನೇ ಮಹಡಿ ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿರಾಜ್ /ಇಂಧನ ಇಲಾಖೆ
4. ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಆರ್ಥಿಕ ಇಲಾಖೆ ವೆಚ್ಚ 1 ಶಾಖೆಯ ಕಡತಕ್ಕೆ
6. ರಕ್ಷಾ ಕಡತಕ್ಕೆ
7. ಹೆಚ್ಚುವರಿ ಪ್ರತಿ